ಶ್ರೀ ಎಸ್.ಎಂ. ಯಾಹ್ಯಾ:– ಈಗ ಈ ಒಂದು ವಿಚಾರದಲ್ಲಿ ಬಹಳ ಆಕ್ರಮ ಆಗಿದೆ. ಇರೆಗ್ಯುಲಾರಿಟೀಸ್ ಆಗಿದೆ ಎಂದು ಹೇಳಿ ಸರ್ಕಾರದವರು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಡಿಡಿಪಿಐಗೆ ಸಸ್ಪೆಂಡ್ ಮಾಡಿ ಇಟ್ಟಿದ್ದೇವೆ. ಅವರು ಪುನಃ ಟ್ರಿಬ್ಯೂನಲ್‌ಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. He has taken a staty in the Tribunal. Twelve teachers have been removed from service. The 12 candidates who had obtained the appointments by giving false certificates have been removed from service. The Government has taken quick steps in the matter.

SRI B.I. PATIL:_ But still the Dy.D.P.I. is working there. When will you vacate the stay?

SRI S.M. YAHYA:_ He was kept under suspension but the Administrative Tribunal gave the stay order for suspension.

ಹೇಮಾವತಿ ಯೋಜನೆಯ ಬೋರಣ್ಣಗೌಡ ನಾಲೆಗೆ ಮಾಡಿರುವ ವೆಚ್ಚ.

30 (250) ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೇಮಾವತಿ ಯೋಜನೆಯ ಬೋರಣ್ಣಗೌಡ ನಾಲೆಗೆ ಈವರೆಗೆ ಆಗಿರುವ ವೆಚ್ಚವೆಷ್ಟು ? (ಪ್ರಾಜೆಕ್ಟ್‌ನಲ್ಲಿ ವಿವರ ತಿಳಿಸುವುದು)

ಆ) ಈ ನಾಲೆಗೆ ಮಾಡಿರುವ ಮೂಲ ಅಂದಾಜು ಎಷ್ಟು, ಹಾಗೂ ಅದು ಯಾವಾಗ ಪ್ರಾರಂಭವಾಯಿತು ?

ಇ) 1986ನೇ ಸಾಲಿನಲ್ಲಿ ಹಳ್ಳಿ ಮೈಸೂರಿನವರೆಗೆ ನೀರು ಬಿಡುವ ಭರವಸೆ ಕೊಟ್ಟಿದ್ದು ನಿಜವೇ;

ಈ) ಗುತ್ತಿಗೆದಾರರು ಪೂರ್ತಿಯಾಗಿ ಕೆಲಸ ಮಾಡದೆ ತೊಂದರೆ ಉಂಟು ಮಾಡಿರುವವರು ಎಷ್ಟು; (ಹೆಸರು ಮತ್ತು ವಿಳಾಸ ಕೊಡುವುದು)

ಉ) ಇವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ; ಇಲ್ಲದಿದ್ದಲ್ಲಿ ಕಾರಣವೇನು ?

ಊ) ಇದರಿಂದ ಸರ್ಕಾರಕ್ಕೆ ಆಗಿರುವ ಅಥವಾ ಸಂಭವಿಸಿರುವ ನಷ್ಟ ಎಷ್ಟು;

ಎ) ಈ ನಷ್ಟವನ್ನು ಅವರಿಂದ ವಸೂಲಿ ಮಾಡಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) ಹೇಮಾವತಿ ಯೋಜನೆ ಅಡಿಯಲ್ಲಿ ಬೋರಣ್ಣಗೌಡ ನಾಲೆಗೆ ಈವರೆಗೆ 47.19 ಕೋಟಿ ರೂಪಾಯಿಗಳಷ್ಟು ವೆಚ್ಚವಾಗಿರುತ್ತದೆ.

ಆ) ಈ ನಾಲೆಗೆ ಮಾಡಿರುವ ಅಂದಾಜು ರೂ. 53 ಕೋಟಿ. ಈ ನಾಲೆ ಕೆಲಸಗಳನ್ನು 1978ರಿಂದ ಪ್ರಾರಂಭಿಸಲಾಗಿದೆ.

ಇ) ನಿಜವಲ್ಲ.

ಈ) 13 ಜನ ಗುತ್ತಿಗೆದಾರರು ತಮಗೆ ವಹಿಸಿದ ಕೆಲಸವನ್ನು ಪೂರೈಸಿಲ್ಲ. ಅವರ ಹೆಸರು ಮತ್ತು

ವಿಳಾಸ ಪ್ರತ್ಯೇಕವಾಗಿ ಲಗತ್ತಿಸಿದೆ.

ಊ) ಗುತ್ತಿಗೆ ಕರಾರಿನ ನಿಯಮರೀತ್ಯಾ ಇಲಾಖೆ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) 28.65 ಲಕ್ಷ ರೂ.ಗಳು

ಎ) ಗುತ್ತಿಗೆ ಕರಾರಿನ ಪ್ರಕಾರ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಅನುಬಂಧ – 1

ಕ್ರಮಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ

1) ಶ್ರೀ ರಾಜಣ್ಣ, ಗುತ್ತಿಗೆದಾರರು, ಗೊರೂರು, ಹಾಸನ ಜಿಲ್ಲೆ
2) ಶ್ರೀ ಜಿ.ಪಿ. ಗೋಪಾಲಗೌಡ, ಗುತ್ತಿಗೆದಾರರು, ರವೀಂದ್ರ ನಗರ, ಹಾಸನ.
3) ಶ್ರೀ ಜಿ.ಪಿ. ಪ್ರಕಾಶ, ಗುತ್ತಿಗೆದಾರರು, ಗೊರೂರು, ಹಾಸನ ಜಿಲ್ಲೆ.
4) ಶ್ರೀ ಕೆ.ಸಿ. ಗುರುವಾರೆಡ್ಡಿ, ಗುತ್ತಿಗೆದಾರರು, ಗೊರೂರು ಕ್ಯಾಂಪ್, ಹಾಸನ ಜಿಲ್ಲೆ.
5) ಶ್ರೀ ರಾಮಮೂರ್ತಿ, ಗುತ್ತಿಗೆದಾರರು, ಚನ್ನರಾಯಪಟ್ಟಣ, ಹಾಸನ ಜಿಲ್ಲೆ
6) ಶ್ರೀ ಗೌಸ್ ಸಾಹೇಬ್, ಗುತ್ತಿಗೆದಾರರು, ಹಾಸನ, ಹಾಸನ ಜಿಲ್ಲೆ.
7) ಶ್ರೀ ದೊಡ್ಡಪ್ಪ, ಪಿ. ಗುತ್ತಿಗೆದಾರರು.
8) ಶ್ರೀ ರಮೇಶ್ ಆಳ್ವ, ಗುತ್ತಿಗೆದಾರರು, ದೊಡ್ಡಮಗ್ಗೆ ಕ್ಯಾಂಪ್, ಹಾಸನ ಜಿಲ್ಲೆ.
9) ಶ್ರೀ ಕೆ.ಹೆಚ್. ಅಬ್ದುಲ್ ವಜ್ಜಿದ್, ಕೆ.ಟಿ.ಎನ್. ಮಂಜಿಲ್, ಸಂತೆಪೇಟೆ, ಹಾಸನ
10) ಶ್ರೀ ಎಸ್.ಎನ್. ಪ್ರಸಾದ್, ನಂ.64, ಸ್ಫೂರ್ತಿ, 4ನೇ ಮೈನ್, ಗಂಗಾನಗರ್, ಬೆಂಗಳೂರು – 32
11) ಶ್ರೀ ಟಿ. ಶಿವರಾಮು, ಗುತ್ತಿಗೆದಾರರು, ಕೋಟೆ, ಹೊಳೆನರಸೀಪುರ, ಹಾಸನ ಜಿಲ್ಲೆ.
12) ಹೆಚ್. ಶಿವರಾಜು ಪಿ.ಎ. ಹೋಲ್ಡರ್ ಆಫ್ ಶ್ರೀ ಕೆ.ಎಂ. ಶ್ರೀನಿವಾಸ ಹರಿಹರಪುರ, ಹೊಳೆನರಸೀಪುರ ತಾಲ್ಲೂಕು.
13) ಶ್ರೀ ಸಂಜೀವಲು ಕೇರಾಫ್ ಶ್ರೀ ಎಸ್.ಡಿ. ಅಣ್ಣಯ್ಯ, ಸೀರನಹಳ್ಳಿ, ಹೊಳೆನರಸೀಪುರ ತಾಲ್ಲೂಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಮಾನ್ಯ ಅಧ್ಯಕ್ಷೆಣಿಯವರೆ, ಈ ಹೇಮಾವತಿ ಯೋಜನೆಯಡಿಯಲ್ಲಿ ಬೋರಣ್ಣ ಗೌಡ ನಾಲೆಯು 1978ನೇ ಇಸವಿಯಲ್ಲಿ ಪ್ರಾರಂಭವಾಯಿತು. 14 ವರ್ಷಗಳಾದರೂ ಕೂಡ ಅದರ ನಿಗದಿತ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಹಲವಾರು ತೊಂದರೆಗಳು ಇವೆಯೆಂದು ಅವರ ಉತ್ತರದಿಂದಲೇ ಗೊತ್ತಾಗುತ್ತದೆ. ಆದಷ್ಟು ಬೇಗ ಆ ತೊಡರುಗಳನ್ನೆಲ್ಲ ನಿವಾರಣೆ ಮಾಡಿ ಕೆಲಸವನ್ನು ಬೇಗನೇ ಪೂರ್ತಿ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:– ಈ ಕಾಮಗಾರಿಗಳನ್ನು ಜೂನ್ 1993ರೊಳಗೆ ಮುಗಿಸತಕ್ಕ ಅಂದಾಜು ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಬಹಳ ಸಂತೋಷ. 13 ಜನ ಗುತ್ತಿಗೆದಾರರು ಈಗಾಗಲೇ ಕೆಲಸಗಳನ್ನು ಪೂರೈಸಿಲ್ಲ ಎಂದು ಉತ್ತರದಲ್ಲಿ ತಿಳಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಮಗೆ ಆಶ್ಚರ್ಯ ಆಗುತ್ತಿದೆ. ಇವರೂ ಸಹ ಮಂತ್ರಿಗಳಾಗಿದ್ದವರು.

(ಗೊಂದಲ)

ಶ್ರೀ ಜಿ. ರಾಮಕೃಷ್ಣ:– ನೀವು ಸಹ ನೀರಾವರಿ ಮಂತ್ರಿಗಳು ಆಗಿದ್ದೀರಲ್ಲವೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ:– ನಾನು ಕೂಡ ಬಹಳ ಪ್ರಯತ್ನ ಮಾಡಿದ್ದೇನೆ. ಇನ್ನೂ ಪ್ರಯತ್ನ ಜಾಸ್ತಿ ಬೇಕು ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಹಾಸನ ಎಂದರೆ ಪುಟ್ಟಸ್ವಾಮಿಗೌಡರು ಹಾಗೂ ಹನುಮೇಗೌಡರೂ ನಿಲ್ಲಬೇಕೇ ?

ಉಪಾಧ್ಯಕ್ಷಿಣಿಯವರು:– ನೀವು ಏಕೆ ಇವರ ಮಧ್ಯೆ ನಿಲ್ಲಬೇಕು ?

ಶ್ರೀ ವಾಟಾಳ್ ನಾಗರಾಜ್:– ನಾನು ಸಹಾಯ ಮಾಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಈ 13 ಜನ ಕೆಲಸ ತೆಗೆದುಕೊಂಡು ಸುಮಾರು 10 ವರ್ಷ ಆಯಿತು. ಇವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಕು. 13ಜನ ಟೆಂಡರ್ ಮೇಲೆ ಕೆಲಸ ತೆಗೆದುಕೊಂಡು ಕೆಲಸ ಮಾಡದೇ ಅವರಿಂದ ಅನಾನುಕೂಲ ಆಗಿದೆ ಎಂದು ಉತ್ತರದಲ್ಲಿ ಅಚ್ಚಾಗಿದೆ. ಅಂತಹ ಟೆಂಡರ್‌ದಾರರು 10 ವರ್ಷಗಳಿಂದ ಕೆಲಸ ಮಾಡಿಲ್ಲ. ಆದ್ದರಿಂದ ಶೀಘ್ರವಾಗಿ ಕ್ರಮವನ್ನು ಕೈಗೊಂಡು ಆ ಕೆಲಸವನ್ನು ಪೂರ್ತಿ ಮಾಡತಕ್ಕದ್ದರ ಬಗ್ಗ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಅದಕ್ಕಾಗಿ ನಾವು ನಿಯಮಾವಳಿ ಪ್ರಕಾರ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಹೊಸದಾಗಿ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದೇವೆ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡೇ ಜೂನ್ 1993ರೊಳಗೆ ಈ ಕಾಮಗಾರಿಯನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಪುಟ್ಟಸ್ವಾಮಿಗೌಡರು ಸಂಬಂಧಪಟ್ಟ ಖಾತೆಯ ಮಂತ್ರಿಗಳಾಗಿದ್ದವರು. ಅವರ ಕಾಲದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಉಪಾಧ್ಯಕ್ಷಿಣಿಯವರು:– ಈಗ ಅವರು ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ:– ಅವರ ಅವಧಿಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ತಿಳಿಸಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ನಾನು ಕ್ರಮ ತೆಗೆದುಕೊಂಡಿದ್ದೇನೆ, ಈಗ ಆದಷ್ಟು ಬೇಗ ಮಾಡಿ ಎಂದು ಹೇಳುತ್ತಿದ್ದೇನೆ.

ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರಿಂದ ಸಸಿಗಳನ್ನು ನೆಡುವುದಕ್ಕೆ ಸಂಬಂಧಿಸಿದ ವೆಚ್ಚ.

(301) ಶ್ರೀ ಬಸವಂತರೆಡ್ಡಿ, ಮೋತಕಪಲ್ಲಿ (ಸೇಡಂ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅರಣ್ಯ ಇಲಾಖೆಯವರು ಮುದೋಳ ಗ್ರಾಮದ